**All India Radio, Dharwad**
**Pradesha Samachara(Kannada)**
**17.05.2012 – 0705 hours**

- ದೇಶದಲ್ಲಿರುವ ಅಣುಸ್ಥಾವರಗಳ ಭದ್ರತೆಗೆ ಕೇಂದ್ರ ಸರ್ಕಾರ ಕಟಿಬದ್ಧ – ಪ್ರಧಾನಿ ಡಾಕ್ಟರ ಮನಮೋಹನ ಸಿಂಗ್.

- ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನವರ ಬೆಂಗಳೂರು, ಶಿವಮೊಗ್ಗ, ನಿವಾಸಗಳ ಮೇಲೆ ಸಿ.ಬಿ.ಐ ದಾಳಿ. ಮಹತ್ವದ ದಾಖಲೆ ವಶ.

- ಬರ ಪರಿಹಾರ ಕಾಮಗಾರಿಗಳಿಗೆ, 5 ಸಾವಿರ ಕೋಟಿ ರೂಪಾಯಿ ಅವಶ್ಯಕ – ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ.

- ಬಾಲಕಾರ್ಮಿಕತೆಯ ನಿರ್ಮೂಲನೆಗೆ ಕೇಂದ್ರ ಸರ್ಕಾರ ಸೂಕ್ತ ಕ್ರಮ – ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ.

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ.

**<><><>**

ದೇಶದಲ್ಲಿರುವ 19 ಅಣುಸ್ಥಾವರಗಳು ಭದ್ರವಾಗಿವೆ ಎಂದು ಪ್ರಧಾನಿ ಡಾಕ್ಟರ ಮನಮೋಹನ ಸಿಂಗ್ ಹೇಳಿದ್ದಾರೆ. ನಿನ್ನೆ ಸಂಸತ್ತಿನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಅವರು, ಭದ್ರತೆ ಹಾಗೂ ಸುರಕ್ಷತೆ ವಿಷಯದಲ್ಲಿ, ಸರ್ಕಾರ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡುವುದಿಲ್ಲ ಎಂದರು. ಭಾರತದ ಅಣು ಸ್ಥಾವರಗಳಲ್ಲಿರುವ ಭದ್ರತೆಯ ಕ್ರಮಗಳು ಅತ್ಯದ್ಭುತವಾಗಿವೆ; ಬಹಳಷ್ಟು ಸ್ಥಾವರಗಳಲ್ಲಿ ಯಾವುದೇ ಅನಾಹುತ ನಡೆಯದಿರಲು ಇದೇ ಕಾರಣ; ಅಣು ಸ್ಥಾವರಗಳು ಭದ್ರವಾಗಿ ಕೆಲಸ ನಿರ್ವಹಿಸುತ್ತಿವೆ ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ, ಪ್ರಧಾನ ಮಂತ್ರಿ ಕಛೇರಿಯ ರಾಜ್ಯ ಸಚಿವ್ರ ವಿ.ನಾರಾಯಣಸ್ವಾಮಿ, ಅಣುಸ್ಥಾವರಗಳ ಹತ್ತಿರ ಹಸಿರು ತಾಣವನ್ನು ಏರ್ಪಡಿಸಲಾಗುತ್ತಿದ್ದು, ಅಲ್ಲಿ ಜನರು ತಮ್ಮ ಜೀವನೋಪಾಯವನ್ನು ಹುಡುಕಬಹುದು; ಅಣುಸ್ಥಾವರಗಳ ಸ್ಥಾಪನೆಯಾದ ನಂತರವೂ ಜನರು ಅಲ್ಲಿ ತಮ್ಮ ದೈನಂದಿನ ಚಟುವಟಿಕೆಗಳನ್ನು ಪ್ರಾರಂಭಿಸಬಹುದು ಎಂದರು.

**<><><>**

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನವರ ಬೆಂಗಳೂರು, ಶಿವಮೊಗ್ಗ, ನಿವಾಸಗಳಲ್ಲಿ ದಾಳಿ ನಡೆಸಿದ ಸಿ.ಬಿ.ಐ ತಂಡ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ. ಸುಪ್ರೀಂಕೋರ್ಟ ಆದೇಶದ ಹಿನ್ನೆಲೆಯಲ್ಲಿ, ಯಡಿಯೂರಪ್ಪ ಹಾಗೂ ಅವರ ಕುಟುಂಬ ಸದಸ್ಯರ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸುತ್ತಿರುವ, ಸಿಬಿಐ, ನಿನ್ನೆ ಯಡಿಯೂರಪ್ಪ ಅವರ ಪುತ್ರ ರಾಘವೇಂದ್ರ ಅವರ ಮೇಲೆ ಭ್ರಷ್ಟಾಚಾರ ತಡೆ ಕಾನೂನು 1991 ಅಡಿಯಲ್ಲಿ, ಪ್ರಕರಣ ದಾಖಲು ಮಾಡಿದೆ. ದಾಳಿ ನಡೆದ ಸಮಯದಲ್ಲಿ, ರೇಸ್ ಕೋರ್ಸ್ ನಿವಾಸದಲ್ಲಿದ್ದ ಯಡಿಯೂರಪ್ಪ ಅವರಿಂದ, ಸಿಬಿಐ ಅಧಿಕಾರಿಗಳು ಮಾಹಿತಿ ಪಡೆದರು. ಬಂಧನದ ಭಯ ಎದುರಿಸುತ್ತಿರುವ ಯಡಿಯೂರಪ್ಪ, ಈಗಾಗಲೇ ಹೈಕೋರ್ಟಗೆ ಮಧ್ಯಂತರ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಸಮಾಜ ಪರಿವರ್ತನ ಸಮುದಾಯದ ಎಸ್.ಆರ್.ಹಿರೇಮಠ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಪರಿಣಾಮವಾಗಿ, ಸುಪ್ರೀಂಕೋರ್ಟ, ಯಡಿಯೂರಪ್ಪ ಮತ್ತು ಅವರ ಕುಟುಂಬ ಸದಸ್ಯರ ಅಕ್ರಮ ಗಣಿಗಾರಿಕೆ ಕುರಿತು, ತನಿಖೆ ನಡೆಸಲು ಸಿಬಿಐಗೆ ಆದೇಶ ನೀಡಿತ್ತು. ಈ ದಾಳಿ ಕುರಿತು ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಾವು ನಿರ್ದೋಷಿಯಾಗಿ ಬಿಡುಗಡೆಯಾಗುವುದಾಗಿ ಹೇಳಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ವಶಕ್ಕೆ ಪಡೆದ ಭೂಮಿಯನ್ನು ಡಿನೋಟಿಫಿಕೇಷನ್ ಮಾಡಿದ ಮಾಜಿ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ತಮ್ಮ ಅಳಿಯ ಸೋಹನ ಕುಮಾರ ಹಾಗೂ ಪುತ್ರರಿಗೆ 40 ಲಕ್ಷಕ್ಕೆ ಮಾರಿ ನಂತರ ಅದನ್ನು 20 ಕೋಟಿ ರೂಪಾಯಿಗೆ ಮಾರಾಟ ಮಾಡಿದ ಆರೋಪ ಎದುರಿಸುತ್ತಿದ್ದಾರೆ.

<><><>

ಬರ ಪರಿಹಾರ ಕಾಮಗಾರಿಗಳಿಗೆ, 5 ಸಾವಿರ ಕೋಟಿ ರೂಪಾಯಿ ಅವಶ್ಯಕ; ಇದರಲ್ಲಿ ಅರ್ಧದಷ್ಟು ಹಣ ಕೇಂದ್ರ ಸರ್ಕಾರ ನೀಡಿದರೆ, ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ, ಪಡಿತರ ವ್ಯವಸ್ಥೆ ಮೂಲಕ ಧಾನ್ಯಗಳ ಸರಬರಾಜು, ಅಂಗನವಾಡಿ ಕೇಂದ್ರ, ಮಧ್ಯಾಹ್ನ ಊಟ ಈ ಎಲ್ಲಾ ಕಾರ್ಯಕ್ರಮಗಳ ಬಗ್ಗೆ, ಕೇಂದ್ರ ತಂಡ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದರು. ಪರ್ವೇಶ್ ಶರ್ಮ ನೇತೃತ್ವ ಬರಕಾಮಗಾರಿ ಪರಿಶೀಲನೆ ತಂಡದ ಅಧಿಕಾರಿಗಳ ಜೊತೆ, ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಚರ್ಚಿಸಿದರು. ಈ ತಂಡದ ಅಧಿಕಾರಿಗಳು, ಮುಖ್ಯ ಕಾರ್ಯದರ್ಶಿ ಎಸ್.ವಿ.ರಂಗನಾಥ ಅವರ ಜೊತೆ ಚರ್ಚಿಸಲಿದ್ದಾರೆ ಎಂದು ಸುದ್ದಿಮೂಲಗಳು ತಿಳಿಸಿವೆ.

<><><>

ಬಾಲಕಾರ್ಮಿಕತೆಯ ನಿರ್ಮೂಲನೆಗೆ ಕೇಂದ್ರ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ನಿನ್ನೆ ರಾಜ್ಯಸಭೆಯಲ್ಲಿ ಮಾಹಿತಿ ನೀಡಿದ ಅವರು, ಕಾನೂನು ಕ್ರಮ ನಕ್ಷೆ, ಬಾಲಕಾರ್ಮಿಕ ಕುಟುಂಬಗಳ ಸಮಗ್ರ ಪ್ರಗತಿ, ಬಾಲಕಾರ್ಮಿಕತೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಸೂಕ್ತ ಕ್ರಮ ಮುಂತಾದ ಅಂಶಗಳೊಂದಿಗೆ ಸರ್ಕಾರ, ಬಾಲ ಕಾರ್ಮಿಕತೆ ನಿರ್ಮೂಲನೆಗೆ ಮುಂದಾಗಿದೆ ಎಂದರು. ದೇಶದ 266 ಜಿಲ್ಲೆಗಳಲ್ಲಿ, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸುತ್ತಿದೆ; ಕಾರ್ಖಾನೆಗಳಿಂದ ಬಿಡುಗಡೆಯಾದ ಮಕ್ಕಳನ್ನು ಶಾಲೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ; ಬಾಲ ಕಾರ್ಮಿಕರಿಗೆ ವೃತ್ತಿಪರ ತರಬೇತಿ, ಆರೋಗ್ಯ ತಪಾಸಣೆ, ಪೌಷ್ಠಿಕಾಹಾರ, ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ನುಡಿದರು. ಕಳೆದ 6 ತಿಂಗಳ ಅವಧಿಯಲ್ಲಿ ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ ಸಂಸ್ಥೆಯ ನೌಕರರಿಗೆ ವೇತನ ಹಾಗೂ ಇತರೆ ಬಾಕಿ ಹಣ ಸಂದಾಯವಾಗದಿರುವ ಬಗ್ಗೆ, ಕಾರ್ಮಿಕ ಇಲಾಖೆಗೆ ದೂರುಗಳು ಬಂದಿಲ್ಲ ಎಂದರು. ಭವಿಷ್ಯ ನಿಧಿ ಕಛೇರಿಯ ಹೇಳಿಕೆ ಪ್ರಕಾರ, ನೌಕರರಿಗೆ ನೀಡಬೇಕಾದ ಭವಿಷ್ಯ ನಿಧಿ, ಮತ್ತಿತರೆ ಬಾಕಿಗೆ ಸಂಬಂಧಿಸಿದ ಹಣವನ್ನು, ಸಂಪೂರ್ಣವಾಗಿ ಪಾವತಿ ಮಾಡಲಾಗಿದೆ ಎಂದು ಸಚಿವ ಖರ್ಗೆ ತಿಳಿಸಿದರು.

<><><>

ಮಾರ್ಚ 2 ರಂದು ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ಪ್ರಾಂಗಣದಲ್ಲಿ, ಮಾಜಿ ಸಚಿವ ಜನಾರ್ಧನ ರೆಡ್ಡಿ ಅವರನ್ನು ಕೋರ್ಟಿಗೆ ಕರೆದೊಯ್ಯುವ ದೃಶ್ಯವನ್ನು ಚಿತ್ರೀಕರಿಸಲು ಮಾಧ್ಯಮದವರು ಆಗಮಿಸಿದ್ದರು. ಆ ಸಮಯದಲ್ಲಿ, ವಕೀಲರು ನಡೆಸಿದ ವಿಧ್ವಂಸ ಕಾಂಡದಲ್ಲಿ, ಹಲವಾರು ಎಲೆಕ್ಟ್ರಾನಿಕ್ ಮಾಧ್ಯಮದ ಪ್ರತಿನಿಧಿಗಳು ಗಾಯಗೊಂಡಿದ್ದರು. ಅಂದು 25 ಜನ ಗಾಯಗೊಂಡಿದ್ದು, ವಾಹನಗಳು ಸುಟ್ಟು ಕರಕಲಾಗಿದ್ದವು. ಈ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ, ಹೈಕೋರ್ಟು, ವಿಶೇಷ ತನಿಖಾ ತಂಡವನ್ನು ಆದೇಶಿಸಿದೆ ಎಂದು ಸುದ್ದಿ ಮೂಲಗಳು ತಿಳಿಸಿವೆ.

<><><>

ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಗುರುತಿಸಲು, ಕೇಂದ್ರ ಸರ್ಕಾರ ತಾಂತ್ರಿಕ ತಂಡವನ್ನು ರೂಪಿಸಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಅಶ್ವಿನ ಕುಮಾರ ಹೇಳಿದ್ದಾರೆ. ಬಡತನದ ವಿವಿಧ ಆಯಾಮಗಳನ್ನು ಈ ತಂಡವು ಸ್ಪರ್ಶಿಸಲಿದೆ; ಈ ರೀತಿ ಮಾಡುವುದರಿಂದ ವಿವಿಧ ಸರ್ಕಾರಿ ಯೋಜನೆಗಳಿಂದ ಫಲಾನುಭವಿಗಳು ಲಾಭಾನ್ವಿತರಾಗಲು ಸಾಧ್ಯವಾಗುತ್ತದೆ ಎಂದರು. ನಿನ್ನೆ ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ ಅವರು, ಈ ತಾಂತ್ರಿಕ ತಂಡದ ರಚನೆಯು ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ; ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸೇರಿದಂತೆ, ಕೇಂದ್ರ ಸರ್ಕಾರ, ಬಡವರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ; 2012-2013 ನೇ ಸಾಲಿನ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಾಗಿ, 33 ಸಾವಿರ ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ ಎಂದರು.

<><><>

ಭಾರತೀಯ ಆಧ್ಯಾತ್ಮಿಕತೆಯಲ್ಲಿ ಕ್ಷೇತ್ರದಲ್ಲಿ ಹುರಕಡ್ಲಿ ಅಜ್ಜನವರು ಮಹತ್ತರ ಸಾಧನೆ ಮಾಡಿದ್ದು, ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು

ಖ್ಯಾತ ವಿಮರ್ಶಕಿ ಹಾಗೂ ಲೇಖಕಿ ಶಾಂತಾ ಇಮ್ರಾಪುರ ಹೇಳಿದ್ದಾರೆ. ನಿನ್ನೆ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾಕ್ಟರ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ನಡೆದ, ಶಿಕ್ಷಣ ಸಂಸ್ಥೆಯ ಹರಿಕಾರ ಹಾಗೂ ಪ್ರಭಾವಿ, ಆಧ್ಯಾತ್ಮಿಕ ದಿವ್ಯ ಮೂರ್ತಿ, ಪರಮಪೂಜ್ಯ ಹುರಕಡ್ಲಿ ಅಜ್ಜನವರ 113 ನೇ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಮಾತನಾಡಿದ, ಗದಗ ವಿರೇಶ್ವರ ಆಶ್ರಮದ ಕಲ್ಲಯ್ಯಜ್ಜನವರು, ಇಂದಿನ ಯುವ ಪೀಳಿಗೆ, ತಮ್ಮ ಪೋಷಕರ ಬಗ್ಗೆ ಕಾಳಜಿವಹಿಸಬೇಕು ಎಂದರು.

<><><>

ಸುಪ್ರೀಂಕೋರ್ಟಿನ ನಿರ್ದೇಶನದಂತೆ, ನಿನ್ನೆ ಎಸ್.ಪಿ. ಮಂಜೇಶ್ವರರಾವ್ ನೇತೃತ್ವದ 8 ಜನರ ಸಿಬಿಐ ತಂಡ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ತೋರಣಗಲ್ಲಿನ ಜಿಂದಾಲ್‌ನ ವಿದ್ಯಾನಗರಕ್ಕೆ ಆಗಮಿಸಿ ದಾಳಿ ನಡೆಸಿದೆ. ಸಂಡೂರು ತಾಲೂಕಿನಲ್ಲಿ ಗಣಿ ಗುತ್ತಿಗೆ ಪಡೆಯಲು, ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನಲ್ಲಿರುವ, ಜಿಂದಾಲ್ ಸೌತ್ ವೆಸ್ಟ್ ಮೈನಿಂಗ್ ಕಂಪನಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರರ, ಪ್ರೇರಣಾ ಶಿಕ್ಷಣ ಟ್ರಸ್ಟ್‌ಗೆ, 10 ಕೋಟಿ ರೂಪಾಯಿ ಲಂಚದ ರೂಪದಲ್ಲಿ ದೇಣಿಗೆ ನೀಡಿದ್ದು, ರಾಚೇನಹಳ್ಳಿಯ ಒಂದು ಕೋಟಿ ರೂಪಾಯಿ ಬೆಲೆ ಬಾಳುವ ನಿವೇಶನವನ್ನು 20 ಕೋಟಿ ರೂಪಾಯಿಗೆ ನೀಡಿ, ಧವಳಗಿರಿ ಎಸ್ಟೇಟ್‌ನಿಂದ ಖರೀದಿ ಮಾಡಿತ್ತು ಎಂದು, ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್.ಹಿರೇಮಠ್ ಸುಪ್ರೀಂಕೋರ್ಟಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ, ಸುಪ್ರೀಂಕೋರ್ಟು ಸಿಬಿಐ ತನಿಖೆಗೆ ಆದೇಶ ನೀಡಿತ್ತು. ನಿನ್ನೆ ಜಿಂದಾಲ್ ಸ್ಟೀಲ್ ಕಂಪನಿಯ ಸಿಈಓ ಡಾಕ್ಟರ ವಿನೋದ್ ನಾವಲ್ ಮತ್ತು ಸೌತ್ ವೆಸ್ಟ್ ಮೈನಿಂಗ್ ಕಂಪನಿಯ ಪ್ರಭಾರಿ ಸಿಈಓ ಯು.ಕೆ.ಪಾಂಡೆ ಅವರ ಮನೆ ಮೇಲೆ ದಾಳಿ ನಡೆಸಿ, ಸಿಬಿಐ ಅಧಿಕಾರಿಗಳು ಕಡತಗಳ ಪರಿಶೀಲನೆ ನಡೆಸಿದರು. ನಂತರ ಸಂಡೂರು ರಸ್ತೆಯ ಬೆಟ್ಟ ಪ್ರದೇಶದಲ್ಲಿನ, ಜಿಂದಾಲ್ ಸಂಸ್ಥೆಯ ಸೌತ್ ವೆಸ್ಟ್ ಮೈನಿಂಗ್ ಕಂಪನಿಯ ಕಚೇರಿ ಮೇಲೆ ದಾಳಿ ಮಾಡಿ, ಸಿಬಿಐ ತಂಡ ಕಡತಗಳ ಪರಿಶೀಲನೆ ನಡೆಸಿದೆ. ಸಿಬಿಐನ ಅಧಿಕಾರಿಗಳಿಗೆ ಜಿಂದಾಲ್ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ವಿಕಾಸ್ ಶರ್ಮ ಅಗತ್ಯ ಮಾಹಿತಿ ನೀಡಿದ್ದಾರೆ.

<><><>

ಕೊಡಗು ಜಿಲ್ಲೆಗೆ ವಿಳಂಬವಾಗಿ ಯೋಜನೆಯ ಅನುದಾನ ಲಭಿಸಿದೆ; ಬರುವ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಈ ಯೋಜನೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ಕೊಡಗು ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ ಆನಂದ್ ಹೇಳಿದ್ದಾರೆ. ಗರ್ಭಿಣಿ ಮಹಿಳೆ ಮತ್ತು ನವಜಾತ ಶಿಶುವಿಗೆ ಚಿಕಿತ್ಸೆ ಮತ್ತು ಆರೋಗ್ಯ ರಕ್ಷಣೆ ನೀಡುವ ನಿಟ್ಟಿನಲ್ಲಿ, ಕೇಂದ್ರ ಸರ್ಕಾರ ಜಾರಿಗೆ ತಂದ ಮಹತ್ವದ ಕಾರ್ಯಕ್ರಮ ಜನನಿ ಶಿಶು ಸುರಕ್ಷಾ ಯೋಜನೆ ಕೊಡಗು ಜಿಲ್ಲೆಯಲ್ಲಿ ಫಲಪ್ರದವಾಗಿದೆ. ಕೊಡಗು ಜಿಲ್ಲಾ ಆರೋಗ್ಯ ಇಲಾಖೆಯಿಂದ ಪ್ರಸವದ ಬಳಿಕ ಮಹಿಳೆ ಮತ್ತು ಮಗುವಿಗೆ ಎಲ್ಲಾ ರೀತಿಯ ಚಿಕಿತ್ಸೆ, ಔಷಧಿಗಳನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ; ಅನಾರೋಗ್ಯದಿಂದ ಜನಿಸಿದ ನವಜಾತ ಶಿಶುಗಳಿಗೆ ಜನಿಸಿದ 30 ದಿನಗಳವರೆಗೂ ಶೂನ್ಯ ವೆಚ್ಚದ ಚಿಕಿತ್ಸೆ ನೀಡಲಾಗುತ್ತಿದೆ; ಬಳಕೆದಾರ ಶುಲ್ಕಗಳಿಂದಲೂ ಯೋಜನೆಯ ಫಲಾನುಭವಿಗಳಿಗೆ ರಿಯಾಯಿತಿ ನೀಡಲಾಗುತ್ತಿದೆ ಎಂದರು. ಕೊಡಗು ಜಿಲ್ಲೆಯ 24 ಪ್ರಾಥಮಿಕ ಆರೋಗ್ಯ ಕೇಂದ್ರ, 6 ಸಮುದಾಯ ಆರೋಗ್ಯ ಕೇಂದ್ರ, 2 ಸಾರ್ವಜನಿಕ ಆಸ್ಪತ್ರೆ ಮತ್ತು ಮಡಿಕೇರಿಯಲ್ಲಿರುವ 1 ಸರ್ಕಾರಿ ಜಿಲ್ಲಾಸ್ಪತ್ರೆಗಳಲ್ಲಿ ಜನನಿ ಸುರಕ್ಷಾ ಯೋಜನೆಯ ಉಪಯೋಗ ದೊರಕುತ್ತಿದೆ ಎಂದು ಡಾಕ್ಟರ ಆನಂದ ನುಡಿದರು.

<><><>

ಕಾಳ ಸಂತೆಯಲ್ಲಿ ಮಾರಾಟ ಮಾಡಲು, ಅಡಗಿಸಿಟ್ಟಿದ್ದ, ಕೋಟ್ಯಾಂತರ ಮೌಲ್ಯದ ಆನೆದಂತವನ್ನು ಕೊಡಗು ಜಿಲ್ಲಾ ಅರಣ್ಯ ಅಪರಾಧ ಪಡೆಯ ಅಧಿಕಾರಿಗಳು ಪತ್ತೆ ಮಾಡಿ, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಸೋಮವಾರಪೇಟೆಯ ಸೋಮಶೇಖರ ಎಂಬಾತನ ಮನೆಯಲ್ಲಿ ಸುಮಾರು 1 ಕೋಟಿ 50 ಲಕ್ಷ ರೂಪಾಯಿ ಬೆಲೆಬಾಳುವ ಆನೆ ದಂತವನ್ನು ಅಡಗಿಸಿಟ್ಟಿರುವ ಬಗ್ಗೆ ಮಾಹಿತಿ ಪಡೆದ ಅರಣ್ಯ ಅಪರಾಧ ತಡೆ ಅಧಿಕಾರಿಗಳು ನಿನ್ನೆ ದಾಳಿ ನಡೆಸಿ ಆನೆ ದಂತವನ್ನು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡ ಬೃಹತ್ ಆನೆ ದಂತವು ಒಟ್ಟು 48 ಕೆ.ಜಿ.ತೂಕವಿದ್ದು, 58 ಇಂಚು ಉದ್ದವಿರುವ ಇವುಗಳ ಮಾರುಕಟ್ಟೆ ಬೆಲೆ 1 ಕೋಟಿ 50 ಲಕ್ಷ ರೂಪಾಯಿಗೂ ಅಧಿಕವಾಗಿದೆ ಎಂದು ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಕೊಡಗು ಸಿ.ಐ.ಡಿ.ವೃತ್ತ ನಿರೀಕ್ಷಕ ರಾಜೇಶ್ ತಿಳಿಸಿದ್ದಾರೆ.

<><><>

ಈಗ ಹವಾಮಾನ ವರದಿ

ರಾಜ್ಯದ ಹಲವೆಡೆ ಮಳೆಯಾಗಿದೆ ಎಂದು ಹವಾಮಾನ ವರದಿ ತಿಳಿಸಿದೆ. ಚಿಂತಾಮಣಿಯಲ್ಲಿ ಗರಿಷ್ಠ 8 ಸೆಂಟಿಮೀಟರ ಮಳೆಯಾಗಿದೆ. ಮಳವಳ್ಳಿ, ಕೋಲಾರ, ರಾಯಲಪಾಡು ಹಾಗೂ ಬೆಂಗಳೂರಿನಲ್ಲಿ ತಲಾ 5, ಹೊಸಕೋಟೆ, ಶ್ರೀರಾಮಪುರ, ಕುಣಿಗಲ್, ಶಿರಾ, ರಾಮನಗರ ತಲಾ 4, ಮಂಡ್ಯ, ಹೊನಕೇರೆ, ಗುಡಿಬಂಡೆ, ಕೊಟ್ಟಿಗೆಹಾರಗಳಲ್ಲಿ ತಲಾ 3, ಮುಳಬಾಗಲ್, ಬಂಗಾರಪೇಟ, ದೇವನಹಳ್ಳಿ, ಮಾಗಡಿ, ಮಧುಗಿರಿ, ಪಾವಗಡ ಹಾಗೂ ಗೌರಿಬಿದನೂರಿಗಳಲ್ಲಿ ತಲಾ 2, ಚಿಕ್ಕಬಳ್ಳಾಪುರ, ಚನ್ನಪಟ್ಟಣ, ಕನಕಪುರ, ಅರಕಲಗೂಡುಗಳಲ್ಲಿ ತಲಾ 1 ಸೆಂಟಿಮೀಟರ ಮಳೆಯಾಗಿದೆ. ಉತ್ತರ ಒಳನಾಡು ಪ್ರದೇಶಗಳಲ್ಲಿ ತಾಪಮಾನ ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ಗರಿಷ್ಠ ತಾಪಮಾನ 41.7 ಡಿಗ್ರಿ ಸೆಲ್ಸಿಯಸ್ ಗುಲಬರ್ಗಾದಲ್ಲಿ ದಾಖಲಾಗಿದೆ. ಹವಾಮಾನ ಮುನ್ಸೂಚನೆಯಂತೆ ದಕ್ಷಿಣ ಒಳನಾಡಿನ ಕೆಲವು ಪ್ರದೇಶಗಳಲ್ಲಿ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ.

<><><>